**ಇಂದು ದಿನಾಂಕಃ 03-05-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರವಾಗಿ ಶ್ರೀ NCH ವಕೀಲರಿಂದಃ-**

ಈ ದಾವೆಯನ್ನು ವಾದಿ ದಾವಾ ಜಮೀನಿನಲ್ಲಿ ಪಾಲು ಬೇಕು ಎಂದು ಸಲಿಸಿರುತ್ತಾರೆ. ದಾವೆಯನ್ನು ಪಾಲುಗಾರಿಕೆಗಾಗಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದಪತ್ರವನ್ನು ನೋಡಿದ ಕಾರಣ ದಾವೆ ಪಾಲುಗಾರಿಕೆಗಾಗಿ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿರುತ್ತದೆ. ನಾನು ಓದಿದ ದಾಖಲೆ ಈಗ ನೋಡುತ್ತಿರುವ ವಾದ ಪತ್ರವಾಗಿದೆ. ದಾವೆಯನ್ನು ಮಾಲೀಕತ್ವ ಘೋಷಣೆಗಾಗಿ, ನಿರ್ಬಂಧಕಾಜ್ಞೆ ಮತ್ತು ಕಂದಾಯ ದಾಖಲೆಗಳ ತಿದ್ದುಪಡಿಗಾಗಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವೆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ವಾದಿ ಮತ್ತು ಪ್ರತಿವಾದಿ ತಂದೆಯ ಹೆಸರು ಶಾಮರಾವ ಪಾಟೀಲ. ಸದರಿ ಶಾಮರಾವ ಪಾಟೀಲ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಶಾಮರಾವ ಪಾಟೀಲ ರವರಿಗೆ ಶೇಶಮ್ಮ ಮತ್ತು ಹೇಮಾವತಿ ಎಂಬ ಇಬ್ಬರು ಹೆಂಡತಿಯರು ಇದ್ದಾರೆ ಎಂದರೆ ಸರಿ. ಶಾಮರಾವ ರವರ 1ನೇ ಹೆಂಡತಿ ಮಗ ವಾದಿ ಎಂದರೆ ಸರಿ. ಶಾಮರಾವ ರವರ 1ನೇ ಹೆಂಡತಿಯ ಇನ್ನೊಬ್ಬ ಮಗ ಮಹೇಂದ್ರ ಎಂದರೆ ಸರಿ. ಶಾಮರಾವ ರವರ 2ನೇ ಹೆಂಡತಿ ಹೇಮಾವತಿ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಹೇಮಾವತಿ ರವರಿಗೆ ಮಲ್ಲಿಕಾರ್ಜುನ ಮತ್ತು ಪ್ರತಿವಾದಿ ಮಕ್ಕಳು ಎಂದರೆ ಸರಿ.

ನಾನು ಸುಲೇಪೇಟ ಗ್ರಾಮದವನು ಎಂದರೆ ಸರಿ. ಶಾಮರಾವ ರವರಿಗೆ ಎಷ್ಟು ಆಸ್ತಿ ಇತ್ತು ನನಗೆ ಗೊತ್ತಿಲ್ಲ. ಶಾಮರಾವ ರವರ ಆಸ್ತಿ ಹಂಚಿಕೆ ಪಾಲುಗಾರಿಕೆಯಲ್ಲಿ ಯಾರಿಗೆ ಎಷ್ಟು ಆಸ್ತಿ ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ದಾವಾ ಆಸ್ತಿ ವಾದಿ ಮತ್ತು ಪ್ರತಿವಾದಿ ತಂದೆ ತಾಯಿಗೆ ಉಪಭೋಗಕ್ಕಾಗಿ ನೀಡಿದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಪ್ರತಿವಾದಿಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ಪಾಲುಗಾರಿಕೆ ಸಮಯಕ್ಕೆ ನಾನು ಹಾಜರು ಇರಲಿಲ್ಲ. ಪಾಲುಗಾರಿಕೆ ಮೌಖಿಕವಾಗಿ ಆಗಿದೆಯೋ ಅಥವಾ ಲಿಖಿತವಾಗಿ ಆಗಿದೆಯೋ ಎಂದು ನನಗೆ ಗೊತ್ತಿಲ್ಲ. ಹಾಗಿದ್ದರೆ ಯಾವ ಆಧಾರದ ಮೇಲೆ ದಾವಾ ಆಸ್ತಿ ಪ್ರತಿವಾದಿಗೆ ಬಂದಿದೆ ಎಂದು ಹೇಳುತ್ತಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಶಾಮರಾವ ರವರು ನನಗೆ ಹೇಳಿದ್ದಾರೇ ಎಂದು ನುಡಿಯುತ್ತಾರೆ. ಈ ರೀತಿ ಶಾಮರಾಮ ರವರು ನನಗೆ ಹೇಳಿ 10 ರಿಂದ 15 ವರ್ಷಗಳು ಆಗಿದೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯವಿಚಾರಣೆಯ ಶಪಥ ಪತ್ರವನ್ನು ಪ್ರತಿವಾದಿ ಹಾಗೂ ಪ್ರತಿವಾದಿಯ ವಕೀಲರು ಬರೆಸಿದ್ದಾರೆ. ನನ್ನ ಮುಖ್ಯವಿಚಾರಣೆಯ ಶಪಥ ಪತ್ರದಲ್ಲಿರುವ ಸಂಗತಿಗಳು ನನಗೆ ನೆನಪಿಲ್ಲ. ವಾದಿ ಮತ್ತು ಪ್ರತಿವಾದಿಯ ತಂದೆ ತಾಯಿ ಮೃತಪಟ್ಟ ನಂತರ ವರ್ಗಾವಣೆಗಾಗಿ ಅರ್ಜಿಯನ್ನು ಯಾರು ಸಲಿಸಿದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ

ಪ್ರತಿವಾದಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ವರ್ಗಾವಣೆ ಅರ್ಜಿಯನ್ನು ಸಲ್ಲಿಸುವ ಸಮಯಕ್ಕೆ ಪ್ರತಿವಾದಿಯೂ ವಾದಿಯ ಒಪ್ಪಿ ಗೆ ಪಡೆದಿದ್ದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ವರ್ಗಾವಣೆ ಅರ್ಜಿ ಸಲಿಸಿದ್ದಾರೆ ಎಂದು ನಿಮಗೆ ಹೇಗೆ ಗೊತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಸಹ ಅವರೊಂದಿಗೆ ಕಾಳಗಿ ತಹಶೀಲ್ದಾರ ಕಚೇರಿಗೆ ಹೊಗಿದ್ದೆ ಎಂದು ನುಡಿಯುತ್ತಾರೆ. ಸದರಿ ತಹಶೀಲ್ದಾರ ರವರ ಕಚೇರಿಯಲೀ ಏನು ಆದೇಶ ಆಗಿದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಪ್ರತಿವಾದಿ ಪರವಾಗಿ ಆದೇಶ ಆಗಿದೆ ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ದಾವಾ ಆಸ್ತಿಯ ಸರ್ವೆ ನಂಬರದಲ್ಲಿ ನನಗೆ ಸೇರಿದ 4 ಎಕರೆ ಜಮೀನು ಇದೆ. ಸದರಿ ಜಮೀನನ್ನು ನಾನು ನೊಂದಾಯಿತ ಖರೀದಿ ಪತ್ರದ ಮುಖಾಂತರ ಖರೀದಿ ಮಾಡಿದ್ದೇನೆ. ಸದರಿ ಖರೀದಿಯಾಗಿ 10 ರಿಂದ 12 ವರ್ಷಗಳು ಆಗಿವೆ. ನಾನು ನೊಂದಾಯಿತ ಖರೀದಿ ಪತ್ರದ ಮುಖಾಂತರ ನನ್ನ ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನ ಸವಳನ್ನು ತೆಗೆದು ನಾನು ದಾವಾ ಆಸ್ತಿಯಲ್ಲಿ ಸಂಗ್ರಹ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇವತ್ತಿಲ್ಲ ನಾಳೆ ತೆಗೆಯುತೇನೆ ಎಂದು ನುಡಿಯುತ್ತಾರೆ. ಈ ರೀತಿ ಸಂಗ್ರಹ ಮಾಡಿದ ಕಾರಣ ರಟಕಲ ಪೋಲಿಸ ಠಾಣೆಯಲ್ಲಿ, ತಹಶೀಲ್ದಾರ ರವರ ಕಚೇರಿಯಲ್ಲಿ ಹಾಗೂ ಮೈನ್ಸ & ಮಿನೆರಲ್ಸ ಕಚೇರಿಯಲಿ ನನ್ನ ವಿರುದ್ಧ ದೂರು ನೀಡಲಾಗಿದೆ ಎಂದರೆ ಸರಿ. ಈ ರೀತಿ ದಾವಾ ಆಸ್ತಿಯಲ್ಲಿ ಸವಳನ್ನು ಸಂಗ್ರಹ ಮಾಡಿ 10 ರಿಂದ 12 ದಿನಗಳು ಆಗಿವೆ ಎಂದರೆ ಸರಿ.

ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ ಆಸ್ತಿಯಲ್ಲಿ ಸವಳನ್ನು ಸಂಗ್ರಹ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ತಾಯಿ ಮೃತಪಟ್ಟ ನಂತರ ದಾವಾ ಆಸ್ತಿಯನ್ನುವಾದಿ ಮತ್ತು ಪ್ರತಿವಾದಿ ಹಂಚಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗೆ ಸಮವಾದ ಹಕ್ಕು ಇದೆ ಎಂದರೆ ಸಾಕ್ಷಿ ಪ್ರತಿವಾದಿಗೆ ಮಾತ್ರ ಹಕ್ಕು ಇದೆ ಎಂದು ನುಡಿಯುತ್ತಾರೆ. ಎಲ್ಲಾ ಗೊತ್ತಿದ್ದರೂ ದಾವಾ ಆಸ್ತಿಯಲ್ಲಿ ಅತಿಕ್ರಮ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ಲೋಕಜ್ಞಾನ ಇಲ್ಲ ಎಂದರೆ ಸರಿಯಲ್ಲ. ಈ ರೀತಿ ಪ್ರತಿವಾದಿಗೆ ಲೋಕಜ್ಞಾನ ಇಲ್ಲ ಎಂದು ತಿಳಿದು ದಾವಾ ಆಸ್ತಿಯನ್ನು ಅತಿಕ್ರಮ ಮಾಡಲು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮುಂದೆ ಮಾಡಿ ಸುಳ್ಳು ಪ್ರತಿವಾದಿ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಗುಲ್ಬರ್ಗಾದಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ಕೊರವಿಯಲ್ಲಿ ಮತ್ತು ಗುಲ್ಬರ್ಗಾದಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ವಾದಿಗೆ ಪಾಲು ನೀಡಬಾರದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ತಂದೆ ತಾಯಿ ಮೃತಪಟ್ಟ ನಂತರ ದಾವಾ ಆಸ್ತಿ ವಾದಿ ಮತು ಪ್ರತಿವಾದಿಯ ಜಂಟಿ ಕುಟುಂಬದ ಆಸ್ತಿ ಮತ್ತು ಅವರು ಜಂಟಿ ಮಾಲೀಕರು ಇರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ